# ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು

**(ತುಮಕೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು)**

ಬಿ.ಹೆಚ್.ರಸ್ತೆ, ತುಮಕೂರು – 572103. ದೂರವಾಣಿ: 0816 2272027

==================================================

ಸಂ.ವಿವಿಕಕಾತು:2020–21

ಪ್ರಾಂಶುಪಾಲರ ಕಛೇರಿ,
ವಿಶ್ವವಿದ್ಯಾನಿಲಯ ಕಲಾ ಕಾಲೇಜು,
ತುಮಕೂರು ದಿನಾಂಕ: 23.07.2020

## ಪ್ರವೇಶಾತಿ ಪ್ರಕ್ರಿಯೆ ಪ್ರಕಟಣೆ

ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜಿನಲ್ಲಿ 2020–21ನೇ ಸಾಲಿನ ಪ್ರಥಮ ಬಿಎ/ಬಿಎಸ್‌ಡಬ್ಲ್ಯು / ಬಿಕಾಂ/ ಬಿಬಿಎಂ/ ಬಿವಿಎ ಪದವಿ ತರಗತಿಗಳ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳು ತುಮಕೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.tumkuruniversity.ac.in ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ: 14–08–2020ಕೊನೆಯ ದಿನವಾಗಿರುತ್ತದೆ. ರೂ. 50 ಅರ್ಜಿ ಶುಲ್ಕವಿರುತ್ತದೆ. ಇನ್ನಿತರೆ ಅಗತ್ಯ ಮಾಹಿತಿ (ಪರಿಚಯ ಕೈಪಿಡಿ –Prospectus), ಪ್ರವೇಶಾತಿ ಸೂಚನೆ, ಶುಲ್ಕದ ವಿವರ) ಕುರಿತು ಮೇಲ್ಕಂಡ ಜಾಲತಾಣದಲ್ಲಿ ವಿವರ ಪಡೆಯಬಹುದಾಗಿರುತ್ತದೆ. ವಿದ್ಯಾರ್ಥಿಯು ಇಚ್ಛಿಸಿದಲ್ಲಿ ಡೌನ್‌ಲೋಡ್ ಮಾಡಿಕೊಂಡು ಮುದ್ರಿತ ಪ್ರತಿಯನ್ನು ಪಡೆದುಕೊಳ್ಳಬಹುದು.

ಸಾಮಾನ್ಯ ವರ್ಗದ ಸೀಟುಗಳಿಗೆ ಈ ಕೆಳಕಂಡಂತೆ ನೇರ ಪ್ರವೇಶ ನೀಡಲಾಗುವುದು:

| ಕ್ರ ಸ | ವಿವರ | ದಿನಾಂಕ |
|---|---|---|
| 01 | ಬಿ.ಕಾಂ ಪದವಿಗೆ ಶೇ.85ಕ್ಕಿಂತ ಹೆಚ್ಚಿನ ಅಂಕ ಗಳಿಸಿರುವ ವಿದ್ಯಾರ್ಥಿಗಳು ನೇರ ಪ್ರವೇಶ ಪಡೆಯಬಹುದಾಗಿದೆ. ಸಾಮಾನ್ಯ ವರ್ಗದ(General Merit) ಸೀಟುಗಳನ್ನು ನೇರ ಪ್ರವೇಶಾತಿಯ ಮೂಲಕ ನೀಡಲಾಗುವುದು (ಪ್ರವೇಶ ಮಿತಿಗೊಳಪಟ್ಟು) | 03.08.2020 ರಿಂದ 07.08.2020 ರವರೆಗೆ ಬೆಳಿಗ್ಗೆ 10.00 ರಿಂದ |
| 02 | ಬಿಎ/ಬಿ.ಎಸ್.ಡಬ್ಲ್ಯೂ, ಬಿ.ಬಿ.ಎಂ ಮತ್ತು ಬಿ.ವಿ.ಎ ಪದವಿಗಳಿಗೆ ಶೇ.70ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ನೇರ ಪ್ರವೇಶ ಪಡೆಯಬಹುದಾಗಿದೆ. ಸಾಮಾನ್ಯ ವರ್ಗದ (General Merit)ಸೀಟುಗಳನ್ನು ನೇರ ಪ್ರವೇಶಾತಿಯ ಮೂಲಕ ನೀಡುವುದು. (ಆಯಾ ಕೋರ್ಸ್/ಕಾಂಬಿನೇಷನ್‌ಗಳ ಪ್ರವೇಶ ಮಿತಿಗೊಳಪಟ್ಟು) | 03.08.2020 ರಿಂದ 07.08.2020 ರವರೆಗೆ ಬೆಳಿಗ್ಗೆ 10.00 ರಿಂದ |

**ಭರ್ತಿಯಾಗದೆ ಉಳಿದ ಸಾಮಾನ್ಯ ವರ್ಗದ ಸೀಟುಗಳು ಹಾಗೂ ಮೀಸಲಾತಿ ಆಧಾರದ ಸೀಟುಗಳಿಗೆ ಈ ಕೆಳಕಾಣಿಸಿದಂತೆ ಕೌನ್ಸಿಲಿಂಗ್ ಮೂಲಕ ಪ್ರವೇಶಾತಿ ಪ್ರಕ್ರಿಯೆ ನಡೆಯುವುದು.**

| ಕ್ರ ಸ | ವಿವರ | ದಿನಾಂಕ |
|---|---|---|
| 01 | ಬಿಎ/ಬಿ.ಎಸ್.ಡಬ್ಲೂ ಮತ್ತು ಬಿ.ವಿ.ಎ ಪದವಿ ಕೋಸ್‌ಗಳಿಗೆ ಮೆರಿಟ್–ಕಂ–ರೋಸ್ಟರ್ ಅನ್ವಯ ಪ್ರವೇಶಾತಿ ನೀಡಲಾಗುವುದು. (ಪ್ರವೇಶ ಮಿತಿಗೊಳಪಟ್ಟು) | 18.08.2020 ಬೆಳಿಗ್ಗೆ 10.00 ರಿಂದ |
| 02 | ಬಿ.ಕಾಂ ಮತ್ತು ಬಿ.ಬಿ.ಎಂ ಪದವಿ ಕೋಸ್‌ಗಳಿಗೆ ಮೆರಿಟ್–ಕಂ–ರೋಸ್ಟರ್ ಅನ್ವಯ ಪ್ರವೇಶಾತಿ ನೀಡಲಾಗುವುದು. (ಪ್ರವೇಶ ಮಿತಿಗೊಳಪಟ್ಟು) | 20.08.2020 ಬೆಳಿಗ್ಗೆ 10.00 ರಿಂದ |

ಪ್ರವೇಶ ಶುಲ್ಕವನ್ನು ಎಲ್ಲಾ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪಾವತಿ ಮಾಡುವುದು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿ ಮತ್ತು ಪೋಷಕರು ಇಚ್ಛಿಸಿದಲ್ಲಿ ಒಂದೇ ಕಂತಿನಲ್ಲಿ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಬಹುದು. ಎರಡು ಹಂತದಲ್ಲಿ ಪ್ರವೇಶ ಶುಲ್ಕವನ್ನು ಪಾವತಿಸಲು ಅವಕಾಶವಿದ್ದು ವಿದ್ಯಾರ್ಥಿ ಮತ್ತು ಪೋಷಕರು ಪ್ರತ್ಯೇಕ ಮನವಿಯೊಂದಿಗೆ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆಯನ್ನು ನೀಡುವುದು ಕಡ್ಡಾಯವಾಗಿರುತ್ತದೆ.

ಮೊದಲನೇ ಕಂತಿನ ಪ್ರವೇಶ ಶುಲ್ಕವನ್ನು ಕಡ್ಡಾಯವಾಗಿ ಪ್ರವೇಶಾತಿ ಸಮಯದಲ್ಲಿ ಪಾವತಿಸಲೇಬೇಕು. ಎರಡನೇ ಕಂತಿನ ಶುಲ್ಕವನ್ನು ದ್ವಿತೀಯ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ವಿ.ಸೂ:– ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಕಡ್ಡಾಯವಾಗಿ ಕೋವಿಡ್–19 ರ ಮುಂಜಾಗ್ರತ ಕ್ರಮಗಳನ್ನು ಅನುಸರಿಸಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಸಹಕರಿಸುವುದು.

ಸಹಿ/–
ಪ್ರಾಂಶುಪಾಲರು